ವಿಜಯವಾಣಿ
ಕನ್ನಡಿಗರ ಧ್ವನಿ

# ವಿದ್ಯಾರ್ಥಿಗಳಿಗೆ ನಾಯಕತ್ವ ಗುಣ ಅಗತ್ಯ



ಜೈನ್ ವಿಶ್ವವಿದ್ಯಾಲಯದ ನಾಲ್ಕನೇ ಘಟಿಕೋತ್ಸವದಲ್ಲಿ ಹಿರಿಯ ವಿಜ್ಞಾನಿ ಡಾ.ವಿ.ಕೆ.ಸಾರಸ್ವತ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ವಿದ್ಯಾರ್ಥಿಗಳು ನಾಯಕತ್ವ ಗುಣಗಳನ್ನು ರೂಢಿಸಿಕೊಳ್ಳುವ ಮೂಲಕ ಭಾರತದ ಬಹುದಿನಗಳ ಮಹಾತ್ವಾಕಾಂಕ್ಷೆಯಾದ ಜಾಗತಿಕ ನಾಯಕತ್ವ ಮನ್ನಣೆ ಪಡೆಯಲು ಸಹಕರಿಸಬೇಕು ಎಂದು ಹಿರಿಯ ವಿಜ್ಞಾನಿ ಡಾ.ವಿ.ಕೆ. ಸಾರಸ್ವತ್ ಅಭಿಪ್ರಾಯಪಟ್ಟರು.

ಜೈನ್ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು. ಶತಮಾನದಿಂದೀಚೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಜನ-ಜೀವನದ ಮೇಲೆ ಅಭೂತಪೂರ್ವ ಪ್ರಭಾವ ಬೀರಿದೆ. ಕಳೆದ ಮೂರು ದಶಕಗಳಲ್ಲಿ ನಡೆಯುತ್ತಿರುವ ಕ್ಷಿಪಣಿ ಬೆಳವಣಿಗೆಗಳು ಭವ್ಯ ವೈಜ್ಞಾನಿಕ ಭಾರತದ ಪರಿಕಲ್ಪನೆಯ ಕನಸಿಗೆ ನಾಂದಿ ಹಾಡಿವೆ. ವೈಜ್ಞಾನಿಕ ಕ್ಷೇತ್ರ ಹಲವು ಉತ್ತಮ ಔದ್ಯೋಗಿಕ ಅವಕಾಶಗಳನ್ನು ಇಂದಿನ ಯುವ ಪೀಳಿಗೆಗೆ ನೀಡಿದೆ. ಇಂದಿನ ಯುವಕರು ಉತ್ತಮ ನಾಯಕತ್ವ ಗುಣ ಬೆಳೆಸಿಕೊಳ್ಳುವ ಮೂಲಕ ಭಾರತಕ್ಕೆ ಜಾಗತಿಕ ನಾಯಕತ್ವದ ಮನ್ನಣೆ ತಂದುಕೊಡಬೇಕು ಎಂದರು.

**■ ಜೈನ್ ವಿಶ್ವವಿದ್ಯಾಲಯದ 4ನೇ ಘಟಿಕೋತ್ಸವದಲ್ಲಿ ವಿ.ಕೆ. ಸಾರಸ್ವತ್**

2422 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು. ಜೈನ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಸಿ.ಜೆ. ಕೃಷ್ಣದಾಸ್ ನಾಯರ್, ಕುಲಪತಿ ಡಾ.ಎನ್. ಸುಂದರರಾಜನ್, ಕುಲಸಚಿವ ಪ್ರೊ.ಎನ್.ವಿ.ಎಚ್.ಕೃಷ್ಣನ್ ಮತ್ತಿತರರು ಭಾಗವಹಿಸಿದ್ದರು.